||ಓಂ ಶ್ರೀ ಹರಿ ಓಂ ||    || ಓಂ ಶ್ರೀ ಗುರುಭ್ಯೋ ನಮಃ||

# || ಗುರುಪದ ಹಾರ ||

ಧರೆಯೋದ್ಧಾರಕೆ ಮೆರವರು ಗುರುಗಳು ವರಮಂತ್ರಾಲಯದಲ್ಲಿ
ವರಪ್ರಹ್ಲಾದರು ವ್ಯಾಸ ಪ್ರಭುಗಳು ವರ ತುಂಗಾ ತಟದಲ್ಲಿ

ಕೊರದಿಹ ಕಂಬದಿ ಹರಿಯನು ತೋರಿಸಿ ಹರಿನಾಮವ ಜಗದಲ್ಲಿ
ಮೆರಸಿದ ವರಪ್ರಹ್ಲಾದರು ಮೆರವರು ವರಮಂತ್ರಾಲಯದಲ್ಲಿ
ಹರಿಮತ ಸಾರವ ಹರಿಪದ ಹಾರವ ಪರಿ ಪರಿ ವಿಧಪದ ದಲ್ಲಿ
ಇಳೆಯೊಳು ಸಾರಿದ ವ್ಯಾಸರು ಮೆರೆವರು ವರಮಂತ್ರಾಲಯದಲ್ಲಿ || ೧ ||
..ಧರೆಯೋದ್ಧಾರಕೆ

ಧರೆಯನು ಮುಸುಕಿದ ತಮವನು ತೆರಯಲು ಹರುಷದಿ ಕಲಿಯುಗದಲ್ಲಿ
ಗುರು ರಾಘವೇಂದ್ರರು ಕರುಮೆರೆದಿಹರು ವರಮಂತ್ರಾಲಯದಲ್ಲಿ
ತನುಮನಧನಗಳ ಕೊನೆಗಾಣದೆ ಭವ ವನಚರಿಸುವ ಜನರಲ್ಲಿ
ಮಣೀದೀಪಕ ಮತಿ ಮನನಿಸಿ ಮೆರೆದರು ವರಮಂತ್ರಾಲಯದಲ್ಲಿ || ೨ ||
..ಧರೆಯೋದ್ಧಾರಕೆ

ವಿಷಯದ ವಿಷದಿಂದುಸಿರಿಡುತಲಿ ಬಲುದೆಷೆಕೆಡುತಿಹ ಮನದಲ್ಲಿ
ಹೊಸ ಜ್ಯೋತಿಯ ಕರಮೆರೆಯಲು ಮೆರವರು ವರಮಂತ್ರಾಲಯದಲ್ಲಿ
ದಿನ ಸಂಸಾರದ ನೆನದರೆ ಗೋರದ ಘನರಥ ಎಡತಡೆದಲ್ಲಿ
ಮುನಿ ಮಹಾರಥಿ ಆಕ್ಷಣ ಬಂದೊಲಿವರು ವರಮಂತ್ರಾಲಯದಲ್ಲಿ || ೩ ||
..ಧರೆಯೋದ್ಧಾರಕೆ

ಭುವಿಯೊಳು ಬಹುಪರಿ ಬಳಲುವ ಮನುಜನ ಭವಣೆಯ ಬಲುತಿಳಿದಿಲ್ಲಿ
ತವಕದಿ ಬಿಡಿಸಲು ಅವತರಿಸಿರುವರು ವರಮಂತ್ರಾಲಯದಲ್ಲಿ
ಕರೆದರೆ ಬರುವರು ಅರಗಳಿಗಿರದಲೆ ಕರೆಸಿದದಯಿಗಳೆಲ್ಲಾ
ಧರೆಯೊಳು ಗುರುಗಳ ಮೊರೆಯಿಡಲಾರದ ನರರೆ ಪಾಪಿಗಳೆಲ್ಲ || ೪ ||
..ಧರೆಯೋದ್ಧಾರಕೆ

ಸುರತರು ಫಲಿಸಿದೆ ವರಕರು ದೊರೆತಿದೆ ವರಮಂತ್ರಾಲಯದಲ್ಲಿ
ತೆರೆವುದು ಮುಸುಕನು ಸ್ತಿರವಲ್ಲವು ತನ ಪರಸುಖ ಸಾಧನದಲ್ಲಿ
ಉರುತರ ತಪಸ್ಸು ಸಮಾಧಿಗಳಿಲ್ಲದೆ ದೊರೆವುದು ಸದ್ಗತಿಯಿಲ್ಲಿ
ಗುರುಪದ ಹಾರ ಅರಿಯದೆ ವೇದ ಪುರಾಣ ಶಾಸ್ತ್ರವ ದೊರೆವುದು ಸನ್ಮತಿಯಿಲ್ಲಿ || ೫ ||
..ಧರೆಯೋದ್ವಾರಕೆ

ಮಾಧವ ಮತದಾಂಭೋನಿಧಿಚಂದ್ರರ ದಿಧೀತಿ ತೊಳಗುವುದಿಲ್ಲಿ
ವಾದಿಗಳೆಲ್ಲರ ಮೊದದಿ ಜಯಿಸಿದ ನಾದವು ಮೊಳಗುವದಿಲ್ಲಿ
ವೇದಾಂತದ ಪೂದೋಟದ ಪರಿಮಳ ಸಾಧಿಸಿ ದೊರೆತಿಹುದಿಲ್ಲಿ
ವೇದವಿಶಾರದೆ ಸ್ವಾದಿಸಿ ಸುಧೆಯ ವಿನೋದದಿ ರಮಿಸುವಳಿಲ್ಲಿ || ೬ ||
..ಧರೆಯೋದ್ವಾರಕೆ

ಪಾವನತರ ಮಹಯಾತ್ರಾ ತೀರ್ಥಗಳೋವಿಸಿ ನೆಲೆಸಿಹರಿಲ್ಲಿ
ಭೂವಲಯಕೆ ಸಲೆ ಆ ವೈಕುಂಠವು ಧಾವಿಸಿ ಬಂದಿಹುದಿಲ್ಲಿ
ಧನ್ವಂತರಿಗಳು ತನುದೋರಿರುವರು ಅನುದಿನ ಮನ ಒಲಿದಿಲ್ಲಿ
ಘನರೋಗಗಳಿಗೆ ಧನುವೇರಿಸಿ ಆ ಕ್ಷಣದೊಳು ಕಳೆದೋಯುವವಿಲ್ಲಿ || ೭ ||
..ಧರೆಯೋದ್ವಾರಕೆ

ಕುಷ್ಟಾದಿಗಳೆಂಭಷ್ಟಾದೆಶೆಗಳ ಶ್ರೇಷ್ಟಾಲಯದೊಳಗಿಲ್ಲಿ
ನಷ್ಟಾಗುತ ಸಕಲೇಷ್ಟವು ದೊರೆವುದು ಸೃಷ್ಟೀಷನ ಕೃಪೆಯಲ್ಲಿ
ಪ್ರೇತ ಪಿಶಾಚಗೃಹಾದಿಗಳೆಲ್ಲವು ಸೋತಿವೆ ಬಲಮುರಿದಿಲ್ಲಿ
ಆತರ ಮೊರೆಯೊಳು ಯಾತರ ಭಯವಿದೆ ಜ್ಯೋತಿರೆ ಪದಯುಗದಲ್ಲಿ || ೮ ||
..ಧರೆಯೋದ್ವಾರಕೆ

ಅಂಧರು ಗುರುಗಳ ಸುಂದರ ಮೂರ್ತಿಯ ಕಣ್ತೆರೆದು ನೋಡುವರಿಲ್ಲಿ
ವಂದ್ಯರು ಮಗುವಿನ ನಂದನದೊಳು ಆನಂದದಿ ಪಾಡುವರಿಲ್ಲಿ
ಜನುಮದ ಮೂಕರು ಚಿನ್ಮಯ ಮೂರ್ತಿಯ ವಿನುತದಿ ಕೀರ್ತಿಪರಿಲ್ಲಿ
ಘನಮಹಬದಿರರು ಮನದಣಿ ಕೇಳುತ ಮುನಿಗಳ ಪ್ರಾರ್ಥಿಪರಿಲ್ಲಿ || ೯ ||
..ಧರೆಯೋದ್ವಾರಕೆ

ಯಂತರ ಗುರುಗಳ ತಂತರನಂತಸ್ವತಂತ್ರವು ರಾಜಿಪುದಿಲ್ಲಿ
ಅಂತರ ಹೊಳೆ ಗುರುವಂತರ ಗಾನ ನಿರಂತರ ಸುಖವಿಹುದಿಲ್ಲಿ
ವ್ಯಂಗಕೆ ಸಂಗವು ಭಂಗಕೆ ಸಿಂಗರ ಕಂಗೆಡೆ ಮಂಗಳವಿಲ್ಲಿ
ಕಂಗೊಳಿಪುದು ಸುತರಂಗಿಣಿ ತೀರದ ಪುಂಗವರಾಲಯದಲ್ಲಿ || ೧೦ ||
..ಧರೆಯೋದ್ಧಾರಕೆ

ಭವ ಸಾಗರವನು ದಾಟಿಸೆ ಬಲು ಅನುಭವಿಕರು ನಾವಿಕರಿಲ್ಲಿ
ತವಕದಿ ನಿಂದಿರೆ ಸವಿಯುವದೇತಕೆ ಭುವಿಯೊಳು ಬಹುಪರಿಯಿಲ್ಲಿ
ಸಂತತಿ ಸಂಪದ ಆಯುರರೋಗ್ಯವು ನಂದದಿ ದೊರೆಯುವುದಿಲ್ಲಿ
ಚಿಂತಿಪುದೇತಕೆ ಭ್ರಾಂತಿಯೊಳೆಲ್ಲರು ಪಂತದಿ ಗುರುನಿಂತಲ್ಲಿ || ೧೧ ||
..ಧರೆಯೋದ್ಧಾರಕೆ

ರಾಜರ ರಾಜರ ಗುರುಮಹರಾಜರ ದೇಹವ ಬಣ್ಣಿಪುದೆಂತು
ರಾಜಿಪ ಶ್ರೀಹರಿ ಪಾದ ಸರೋಜವ ಪೂಜಿಪ ಸಂಪದರಿಂತು
ಅನಗರು ಇವರಾ ಘನತೆಯ ನೆಲೆಯದು ಮನುಜರಿಗರಿಯುವದೆಂತು
ಘನವ್ಯಾಪಕ ಜಪ ಜನಕ ಜನಾರ್ದನ ಅಣಿಯಾಗಿರೆ ಬಲುನಿಂತು || ೧೨ ||
..ಧರೆಯೋದ್ಧಾರಕೆ

ತುಂಗಾ ತೀರ ವಿರಾಜರ ಕೀರ್ತಿಯು ಬಂಗಾರದ ಹೊಳೆಯಲ್ಲಿ
ಶೃಂಗಾರದಿ ಹರಿ ಪೊಂಗೊಳಲೂದುತ ಕಂಗೋಚರಿಸುವನಿಲ್ಲಿ
ಅನಿಮಿಷರೆಲ್ಲರು ಮುನಿಕುಲರೊಂದಿಗೆ ಕುಣಿಯುವರನುನಯದಿಂದಾ
ವನಗೋಪಾಲನ ಘನತೆಯ ಕೀರ್ತಿಸಿ ವಿನುತದಿ ಸಂಭ್ರಮದಿಂದಾ || ೧೩ ||
..ಧರೆಯೋದ್ಧಾರಕೆ

ಭೂಸುರರೆಲ್ಲರು ಶ್ರೀಷನ ಗುಣಗಳ ಸಾಸಿರ ನಾಮಗಳಿಂದಾ
ಕೇಶವನೊಲಿದನ ತೋಷದಿ ತುತಿಪರು ಸೂಸುವ ಭಾಷ್ಪಗಳಿಂದಾ
ಬೃಂದಾವನ ಗೋವಿಂದನು ಗುರುಗಳ ವೃಂದಾವನದೊಳಗಿಂದು
ಮುಂದೋರದ ಭವ ಬಂದದಿ ಸಿಲುಕಿದ ವೃಂದವ ಪೊರೆಯುವನಿಂದು || ೧೪ ||
..ಧರೆಯೋದ್ಧಾರಕೆ

ಸುಂದರ ಗುಡಿ ಶೃಂಗಾರದಿ ಶೋಭಿಪ ಚಂದದಿ ಮಂಟಪದಲ್ಲಿ
ವಂದಿತ ಗುರು ವೃಂದಾರಕರೆಸವರು ಕುಂದದ ಕಾಂತಿಯೊಳಿಲ್ಲಿ
ಮುತ್ತಿನ ಹಾರವು ಕಸ್ತೂರಿ ತಿಲಕವು ರತ್ನದಪದಕಗಳಿಂದಾ
ಚಿತ್ತದ ಭ್ರಾಂತಿಯನುತ್ತರಿಪವು ಪುರುಷೋತ್ತಮ ಗಾಯನದಿಂದಾ || ೧೫ ||
..ಧರೆಯೋದ್ಧಾರಕೆ

ದ್ವಾದಶನಾಮವು ಮೋದದಿ ಗುರುಗಳ ಸಾದೃಷ ಸದ್ಗುರುವೆಂದು
ಭೂದಿವಿಜರಗನುವಾಧಿಸಿ ತೋರ್ಪುದು ಶ್ರೀಧರ ಸಂಪದರೆಂದು
ದಂಡ ಕಮಂಡಲ ಕೊಂಡಿಹ ವಸನದಿ ಮಂಡಿತ ಗುರುವರರಿಂದು
ಪಂಡರಿನಾಥನ ಕಂಡಿತ ಪ್ರೀಯರು ದಂಡ ಪ್ರಣಾಮಗಳಿಂದು || ೧೬ ||
..ಧರೆಯೋದ್ಧಾರಕೆ

ಎಳೆತುಳಸಿಯ ವನಮಾಲೆಯ ಕೊರಳೊಲು ವಿಲಸಿತ ಕುಸುಮಗಳಿಂದಾ
ಕೊಳಲುದೂವ ಹರಿ ಕಳೆಯನು ತೋರ್ಪುದು ಮೊಳಗುವ ವಾದ್ಯಗಳಿಂದಾ
ರಥವೇರಿದ ಗುರು ಪತದೊಳು ಸಾಗಿರೆ ಪೃಥಿವಿಯು ಧಿಮಿಧಿಮಿಕೆಂದು
ರಥಿಕರ ಡಂಗುರ ನಾದನಿನಾದದಿ ಪ್ರತಿಧ್ವನಿ ಕೊಡುತಿಹರಿಂದು || ೧೭ ||
..ಧರೆಯೋದ್ಧಾರಕೆ

ಭುವಿಯೊಳು ಮೊಳಗುವ ಜಯಬೇರಿಗೆ ಆ ದಿವಿಜರು ಸಂಭ್ರಮದಿಂದಾ
ಜವದೊಳು ಪೂಮಳೆ ಗರೆವರು ಪೋಷಿಸಿ ದಿನ ದುಂಧುಭಿಧ್ವನಿಯಿಂದಾ
ವರಮಂತ್ರಾಲಯ ಗುರು ಸಮ್ರಾಟರು ಮೆರೆವರು ವೈಭವದಿಂದಾ
ಗುರು ಮಧ್ವೇಶನ ಹಿರಿಯ ಪತಾಕೆಯ ತೆರದುದು ಬಹು ಸಿರಿಯಿಂದಾ || ೧೮ ||
..ಧರೆಯೋದ್ಧಾರಕೆ

ಹರಿಯನು ತೋರಿಸಿ ಗುರುಸಂದರ್ಶನ ಉರುತರ ಪುಣ್ಯವದಿಂದು
ಗುರು ಸಂಕೀರ್ತನೆ ಸಿರಿಸಂಪದದೊಳು ನಿರುತದಿ ಪಾಲಿಪುದೆಂದು
ಗುರು ಪಾದೋದಕ ಪೊರೆವುದು ಭಕ್ತರ ಧುರಿತೊವ್ವವಕಳೆದಿಂದು
ಗುರುಸೇವೆಯು ವರಪದವಿಯ ಮೆರೆವುದು ಅರಿವುದು ಸತ್ಯವಿದೆಂದು || ೧೯ ||
..ಧರೆಯೋದ್ಧಾರಕೆ

ಗುರುಮಹರಾಜರೆ ವರ ಮುನಿತೇಜರೆ ಎರಗುವೆ ನಿಮ್ಮಡಿಗಿಂದು
ಘನಸಂಸಾರದೊಳಿರೆ ತರಗಾದೆನು ಪೊರೆವುದು ಕರುಣದೊಳಿಂದು
ಘನಭವರೋಗದಿ ಅನುಭವಭೋಗದಿ ತನುಮನ ತಾಪದಿ ನೊಂದು
ದಿನದಿನ ಕೊರಗಿದೆ ಮನದೊಳು ಮರುಗಿದೆ ಕನಿಕರ ತೋರುವುದಿಂದು || ೨೦ ||
..ಧರೆಯೋದ್ಧಾರಕೆ

ಹಸು ತೃಷೆ ವಿಷಯದಿ ವ್ಯಸನದಿ ಬಹುಪರ ವಶನಾದೆನು ಸೆರೆಗೊಂಡು
ಬಿಸಜಾಕ್ಷನ ಪದ ತುಸುಸಹ ನೆನಯದೆ ಪಶು ಜೀವನ ಕೈ ಕೊಂಡು
ಶಿಶುವೆಂದರಿಯುತ ಶಶಿ ಹಾಸದಿ ನರ ಪಶು ಮಹಪಾಪಿಯನಿಂದು
ಅಸದಳ ಭಕುತಿಯೊಳೆಸೆಯುವ ಮತಿಮನನಿಸಿ ಸೆಲೆ ಪೊರುಯುವದಿಂದು || ೨೧ ||
..ಧರೆಯೋದ್ಧಾರಕೆ

ಮೀಸಲು ಮುಡುಪಿದು ಸೂಸಿತು ಹೃದಯದಿ ಭಾವಿಸಿ ಗುರುಪದಕೆಂದು
ಪೂಸಿದ ಪರಿಮಳ ವಾಸಿಸೆ ಬಲು ಸುವಿಕಾಸಿತ ಹಾರವಿದೆಂದು
ಗುರುಪದ ಸೇವಿಸಿ ಹರುಷದಿ ಭಾವಿಸಿ ಗುರುಪದ ಹಾರವನಿಂದು
ಇರಿಸಿದೆ ಪದದೊಳ್ ಹರಿ ವಿಠ್ಠಲೇಶನೆ ನಿರುತದಿ ಪಾಲಿಪುದೆಂದು || ೨೨ ||
..ಧರೆಯೋದ್ಧಾರಕೆ